# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.68/2023

ಪಿ.ಡಬ್ಯೂಃ2

ಸಿಡಬ್ಲ್ಯೂ-2

ಸಾಕ್ಷಿದಾರರ ಹೆಸರು : ಚೆನ್ನಪ್ಪಾಲಮಾಣಿ

ತಂದೆಯ ಹೆಸರು : ದೇವಪ್ಪಾಲಮಾಣಿ

ವಯಸ್ಸು : 29 ವರ್ಷ

ಉದ್ಯೋಗ : ಅರಣ್ಯಪಾಲಕ , ಮಾಸ್ತಿಕಟ್ಟಾವಲಯ

ವಾಸ : ಅಂಕೋಲಾ

ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಕಳೆದ 6 ವರ್ಷಗಳಿಂದ ಮಾಸ್ತಿಕಟ್ಟಾವಲಯದ ಹೆಬ್ಬುಳ ಶಾಖೆಯಲ್ಲಿ ಗಸ್ತು ಅರಣ್ಯ ಪಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2.ದಿಃ 23-08-2022 ರಂದು ಚಾಸಾ-1 ರವರು ನನಗೆ ಕರೆ ಮಾಡಿ ಹೆಬ್ಬುಳ ಶಾಖೆಯ 1 ನೆ ಆರೋಪಿ ರವರ ಮನೆಯಲ್ಲಿ ಕಾಡು ಪ್ರಾಣಿ ಕೊಂದು ಮಾಂಸವನ್ನು ಇಟ್ಟಿದ್ದಾರೆಂದು ಬಾತ್ಮಿ ಯ ಬಗ್ಗೆ ಹೇಳಿದ್ದು ಅದರಂತೆ ನಾನು ನಮ್ಮ ಸಿಬ್ಬಂದಿಯವರ ಜೊತೆಗೆ ಚಾಸಾ -1 ರವರ ಜಾುತೆ ಹೆಬ್ಬುಳಕ್ಷಕ ಬಂದಿರುತ್ತೇನೆ ನಂತರ ಪಂಚರಿಗಾಗಿ ಹುಡುಕುತ್ತಾ ಹೆಬ್ಬುಳ ಗ್ರಾಮದ ಚಾಸಾ -3 ರವರ ಮನೆಗೆ ಹೋಗಿ ಸ್ಧ್ರಿ ಬಾತ್ಮಿ ಬಗ್ಗೆ ತಿಳಿಸಿ ಕರೆದು ಕೊಂಡು ಅಲ್ಲಿಂದ ಹೆಬ್ಬುಳ ಗ್ರಾಮದ ಚಾಸಾ -4 ರವರಿಗೆ ಸ್ಧ್ರಿ ಬಾತ್ಮಿಯ ಬಗೆಗ ತಿಳಿಸಿ ಕರೆದು ಕೊಂಡು ಇಲಾಖಾ ವಾಹನದಲ್ಲಿ 1 ನೇ ಅರೋಪಿ ಮನೆಗೆ ಹೋದೆವು . ಮುದುವರೆದು ಚಾಸಾ -1 ರವರು ಮನೆಯಲ್ಲಿದ್ದ 1 ನೆ ಅರೋಪಿ ಯನ್ನು ಕರೆದು ಸರ್ಚ ವಾರಂಟ ನ್ನು ತೋರಿಸಿ ನಿಮ್ಮ ಮೇಲೆ ಕಾಡು ಪ್ರಾಣಿ ಕೊಂದು ಮಾಂಸ ವನ್ನು ಇಟ್ಟಿರುತ್ತಾರೆಂದು ಬಾತ್ಮಿ ಬಂದಿದ್ದು ನಿಮ್ಮ ಮನೆಯನ್ನು ಪರಿಶೀಲಿಸುತ್ತೆವೆ ಎಂದು ಹೇಳಿ ಅವರ ಮನೆಯ ಒಳಗೆ ಹೋದೆವು . ಮುಂದುವರೆದು ಪರಿಶೀಲಿಸುತ್ತಾ ಅವರ ಮಲಗುವ

ಕೋಣೆಯಲ್ಲಿ ಮಂಚದ ಕೆಳಗೆ ಒಂದು ಸ್ಟಿಲ ಪ್ಪಾತೆಯಲ್ಲಿ ಮಾಂಸ ಮುಚ್ಚಿಟ್ಟಿರುವುದು ಕಂಡುಬಂದಿರುತ್ತದೆ ಮತ್ತು ಅಲ್ಲಿಯೇ ಒಂದುಬಟ್ಟೆಯಲ್ಲಿ ಒಂದು ಬಂದೂಕನ್ನು ಸುತ್ತಿಟ್ಟಿರುವುದು ಕಂಡು ಬಂದಿರುತ್ತದೆ . ಮುಂದುರೆದು ಅದನ್ನು ಹೊರಗಡೆ ತಂದು ಸದ್ರಿ ಮಾಂಸದ ಬಗ್ಗೆ ಮತ್ತು ಬಂದೂಕಿನ ಬಗ್ಗೆ ಕೇಳಲಾಗಿ 1 ನೇ ಅರೋಪಿ ಇತನು ಸದ್ರಿ ಮಾಂಸವನ್ನು ನಿನ್ನೆಯ ದಿವಸ ನಾನು ಮತ್ತು ಹೆಬ್ಬುಳ ಗ್ರಾಮದ 2 ನೇ ಆರೋಪಿ ಇಬ್ಬರೂ ಸೇರಿ ಕೊಂಡು 2 ನೇ ಅರೋಪಿ ನಮ್ಮ ಮನೆಯಲ್ಲಿ ಮೊದಲೆ ತಂದು ಇಟ್ಟಿದ್ದ ಬಂದೂಕನ್ನು ತೆಗೆದು ಕೊಂಡು ಹೋಗಿ ನಾನು ಮತ್ತು 2 ನೆ ಅರೋಪಿ ಇಬ್ಬರೂ ಸೇರಿ ಒಂದೊಂದು ಗುಂಡನ್ನು ಹಾರಿಸಿ ಮೆಣಸಿನಗದ್ದೆ ಹತ್ತಿರ ಒಂದು ಜಿಂಕೆ ಕೊಂದಿದ್ದು ಅಲ್ಲಿಂದ ಹೊತ್ತು ಕೊಂಡು 300 ಮೀಟರ ದೂರದಲ್ಲಿ ಅರಮತ್ತಿ ಹಳ್ಳದ ಹತ್ತಿರ ಒಯ್ದು ಅದನ್ನು ಕೊಚ್ಚಿ ಮಾಂಸ ತಯಾರಿಸಿ ಅದರ ಚರ್ಮ , ತಲೆಯ ಭಾಗ , 4 ಕಾಲುಗಳು ಅವುಗಳನ್ನೆಲ್ಲವನ್ನು ಒಂದು ಚೀಲದಲ್ಲಿ ತುಂಬಿ ಮಾಂಸವನ್ನು ಪಾಲು ಮಾಡಿಕೊಂಡು ನಮ್ಮ ನಮ್ಮ ಮನೆಗೆ ಒಯ್ದುದ್ದು ನಿಜವಿರುತ್ತದೆ ಎಂದು ಒಪ್ಪಿಕೊಂಡಿರುತ್ತಾನೆ . ನಂತರ ಸದ್ರಿ ಬಂದೂಕಿನ ಬಗ್ಗೆ ಕೇಳಿದಾಗ 2 ನೆ ಅರೊಪಿಯು ನಿನ್ನೆಯ ದಿವಸ ನಮ್ಮ ಮನೆಯಲ್ಲಿ ತಂದು ಇಟ್ಟು ಹೋಗಿದ್ದು ಇರುತ್ತದೆ ಎಂದುಹೇಳಿದರು.

3. ನಂತರ ಸದ್ರಿ ಬೇಟೆಗೆ ಬಳಸಿದ ಕತ್ತಿ ಮತ್ತು ಹೆಡ ಟಾರ್ಚ ಚಾಕುವಿನ ಬಗ್ಗೆ ಕೇಳಿದಂತೆ ಮನೆಯಲ್ಲಿ ಇದ್ದ ಕತ್ತಿ ಮತ್ತು ಹೆಡ ಟಾರ್ಚ ತೋರಿಸಿ ನಮಗೆ ನೀಡಿದರು . ಮುಂದುವರೆದು ಸದ್ರಿ ಬೇಟೆಯಾಡಿದ ಸ್ಥಳವನ್ನು ತೋರಿಸಿ ಚಾಸಾ-1 ರವರು ತಿಳಿಸಿದಂತೆ 1 ನೇ ಅರೋಪಿ ಒಪ್ಪಿಕೊಂಡು ತೋರಿಸುತ್ತೇನೆ ಎಂದು ಹೇಳಿ ಅಲ್ಲಿಂದ ನಮ್ಮನ್ನು ಒಂದೂವರೆ ಕಿ.ಮೀ ದೂರ ರಾಷ್ಟ್ರೀಯ ಹೆದ್ದಾರಿ 63 ರ ಲಗ್ತ ಮೆಣಸಿನಗದ್ದೆ ಹತ್ತಿರ ಕರೆದು ಕೊಂಡು ಹೋಗಿ ತಾವು ಇಬ್ಬರೂ ನಿಂತು ಗುಂಡು ಹಾರಿಸಿದ ಸ್ಥಳ ತೋರಿಸಿದರು . ನಂತರ ಅಲ್ಲಿಂದ 300 ಮೀಟರ ದೂರ ಜಿಂಕೆ ಕೊಂದು ಕೊಚ್ಚಿ ಮಾಂಸ ತಯಾರಿಸಿದ ಸ್ಥಳ ತೋರಿಸಲು ಹೇಳಿದಂತೆ ಅರಮತ್ತಿ ಹಳ್ಳದ ಹತ್ತಿರ ಕೊಂಡು ಒಯ್ದು ಮಾಂಸವನ್ನು ಕೊಚ್ಚಿ ತಯಾರಿಸಿದ ಸ್ಥಳ ತೋರಿಸಿರುತ್ತಾನೆ . ನಂತರ ಚಾಸಾ -1 ರವರು ನೀವು ಇದು ಮಾಡಿದ್ದು ಅರಣ್ಯ ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ನಿಯಮ ಉಲ್ಲಂಘನೆ ಯಾಗಿರುತ್ತದೆ ಎಂದುಹೇಳಿ 1 ನೆ ಅರೋಪಿಯನ್ನು ದಸ್ತಗಿರಿ ಮಾಡಿರುತ್ತಾರೆ . ಹಾಗೂ ಸದ್ರಿ ಪ್ರಕರಣದಲ್ಲಿ ಸಿಕ್ಕ ಜಿಂಕೆಯ ಮಾಂಸ , ಸ್ಟಿಲ ಪಾತ್ರೆ ಮತ್ತು ಮುಚ್ಚಳ , ಬಂದೂಕು , ಹೆಡ ಟಾರ್ಚ , ಕತ್ತಿ ಇವುಗಳನ್ನು ಚಾಸಾ-3 ಮತ್ತು 4

ರವರ ಸಮಕ್ಷಮ ಚಾಸಾ -1 ರವರು ಪಂಚನಾಮೆ ಕ್ರಮ ಜರುಗಿಸಿ ಸದ್ರ ಮೆಲ್ಕಂಡ ವಸ್ತುಗಳನ್ನು ಜಪ್ತು ಪಡಿಸಿಕೊಂಡಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 5 ಗುರುತಿಸಿರುತ್ತಾರೆ . ಸಾಕ್ಷಿಗೆ ಈಗಾಗಲೆ ಗುರುತಿಸಲಾಗಿರುವ ನಿಪಿ-2 ನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ-2 ಬಿ ಎಂದು ಗುರುತಿಸಲಾಯಿತು .

4. ಸಾಕ್ಷಿಯು ಈಗಾಗಲೇ ಗುರುತಿಸಲಾಗಿರುವ ನಿಪಿ-3 ರಿಂದ 5 ರ ಫೊಟೊ ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಸ್ಟಿಲ ಪಾತ್ರೆ , ಮುಚ್ಚಳ ,ಬಂದೂಕು , ಕತ್ತಿ , ಹೆಡ ಟಾರ್ಚ ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನಿಪಿ-4 ರಲ್ಲಿರು ಘಟನಾ ಸ್ಥಳ ನೋಡಿ ಗುರುತಿಸಿರುತ್ತಾರೆ . ನಿಪಿ-5 ರ ಫೊಟೊ ನೋಡಿ ಸಾಕ್ಷಿ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಫೊಟೊ ಎಂದು ನೋಡಿ ಗುರುತಿಸಿರುತ್ತಾರೆ .ಸಾಕ್ಷಿ ನಿಪಿ-3 ರ ಫೊಟೊ ನೋಡಿ ಮಂಚದ ಕೆಳಗಡೆ ಸ್ಟಿಲ ಪಾತ್ರೆ ಯಲ್ಲಿ ಇಟ್ಟ ಮಾಂಸ ನೋಡಿ ಗುರುತಿಸಿರುತ್ತಾರೆ .ನ್ಯಾಯಾಲಯದ ಮುಂದೆ ಇರುವ 1 ನೆ ಅರೋಪಿ ನೋಡಿ ಸಾಕ್ಷಿ ಗುರುತಿಸಿರುತ್ತಾರೆ .

5. ಅದಾದ ನಂತರ 2 ನೆ ಅರೋಪಿ ಮನೆಗೆ ಹೋಗಿ ಹುಡುಕಾಡಿ ನೋಡಲಾಗಿ ಮನೆಗೆ ಬಿಗ ಹಾಕಿದ್ದು ಇರುತ್ತದೆ . ತದನಂತರ ಸದ್ರಿ ಅರೋಪಿ ಹಾಗೂ 1 ನೆ ಅರೋಪಿ, ಜಪ್ತು ಪಡಿಸಿದ ಎಲ್ಲಾ ಪರಿಕರಗಳನ್ನು ಅರೋಪಿಗಳ ಸಮೇತ ಚಾಸಾ-6 ರವರ ಸಮಕ್ಷಮ ಹಾಜರ ಪಡಿಸಲಾಗಿರುತ್ತದೆ .ತದನಂತರ ದಿಃ27-1-2023 ರಂದು ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ , ಅಂಕೋಲಾ ಉಪ ವಿಭಾಗ ರವರು ಸ್ಥಳ ಪರಿಶಿಲನೆ ಪಂಚನಾಮೆ ಗೆ ಬಂದಂತೆ ಚಾಸಾ -3 ಮತ್ತು 4 ರವರ ಸಮಕ್ಷಮ 1 ನೇ ಅರೋಪಿ ಸ್ಥಳ ತೋರಿಸಿದಂತೆ ಮತ್ತು 1 ನೆ ಆರೋಪಿ ಯೊಂದಿಗೆ 2 ನೆ ಆರೋಪಿ ಕೂಡ ಇದ್ದು ಸ್ಥಳ ತೋರಿಸಿದಂತೆ ಮೆಣಸಿನಗದ್ದೆ ಲಗ್ತ ತಾವು ಇಬ್ಬರು ನಿಂತು ಗುಂಡು ಹಾರಿಸಿ ಜಿಂಕೆ ಕೊಂದ ಸ್ಥಳ , ಜಿಂಕೆ ಸತ್ತು ಬಿದ್ದ ಸ್ಥಳ ತೋರಿಸಿರುತ್ತಾರೆ . ಅಲ್ಲಿಂದ 300 ಮೀಟರ ದೂರದಲ್ಲಿ ಅರಮತ್ತಿ ಹಳ್ಳಕ್ಕೆ ಒಯ್ದು ಮಾಂಸ ಬೇರ್ಪಡಿಸಿ ತೆಗೆದು ಕೊಂಡು ಹೋದ ಸ್ಥಳ ತೋರಿಸಿರುತ್ತಾರೆ . ಅಲ್ಲಿ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಫೊಟೊ ತೆಗೆಯಲಾಗಿರುತ್ತದೆ . ಸಾಕ್ಷಿಗೆ ಈಗಾಗಲೆ ತೋರಿಸಲಾಗಿರುವ ನಿಪಿ-7 ನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ಸಹಿಯನ್ನುನಿಪಿ-7 ಬಿ ಎಂದು ಗುರುತಿಸಲಾಯಿತು . ಆ ಸಮಯದಲ್ಲಿ

ತೆಗೆದ ನಿಪಿ–8 ಮತ್ತು 9 ರ ಪೊಟೊ ವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನಂತರ 1 ನೆ ಅರೋಪಿ ಅವರ ಮನೆಗೆ ಕರೆದು ಕೊಂಡು ಹೋಗಿ ಮಾಂಸ ಇಟ್ಟಿದ್ದ ಸ್ದಳವನ್ನು , ಬಂದೂಕು ಇಟ್ಟಿದ್ದ ಸ್ದಳವನ್ನು ತೋರಿಸಿರುತ್ತಾರೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.